ನಿಯಮ ೩೩ರ ಪ್ರಕಾರ ಸಭೆಯ ಮುಂದೆ ತರುವ ವಿಚಾರಗಳು.

೧) ಸಚ್ಚೇರಿಪೇಟೆಯಂ ಶಾರು ಹಳ್ಳಿಯ ಲೋಕಲ್ ಫಂಕ್ ಆಸ್ಪತ್ರೆಗೆ ವೈದ್ಯರನ್ನು ಪೋಸ್ಟ್ ಮಾಡುವುದು

ಶ್ರೀ ವಸಂತ ವಿ. ಸಾಲಿಯಾನ.—ಮಾನ್ಯ ಅಧ್ಯಕ್ಷರೆ, ೫ವರ್ಷಗಳಿಂದ ವೈದ್ಯರನ್ನು ಇಲ್ಲಿಗೆ ನೇಮಕ ಮಾಡಿಲ್ಲ. ಆಸ್ಪತ್ರೆ ಇರತಕ್ಕ ಜಾಗದಲ್ಲಿ ಹರಿಜನ-ಗಿರಿಜನ ಕಾಲೋನಿ ಇದೆ. ಮತ್ತೊಂದು ಕಾಲೋನಿ ಕೂಡ ಇದೆ. ಅಲ್ಲಿರತಕ್ಕ ಜನಗಳಿಗೆ ಬಹಳ ತೊಂದರೆಯಾಗಿದೆ. ನಾನು ಸರ್ಕಾರವನ್ನು ಒತ್ತಾಯ ಮಾಡುವುದೇನೆಂದರೆ ಆದಷ್ಟು ಬೇಗವೈದ್ಯರನ್ನು ನೇಮಕ ಮಾಡಬೇಕು. ಆಸ್ಪತ್ರೆಗೆ ಬೇಕಾದಂತಹ ಔಷಧಿಗಳನ್ನು ಕೂಡ ಕಳುಹಿಸಿಕೊಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ. ಎಚ್. ಎಲ್. ತಿಮ್ಮೇಗೌಡ.—(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) ಮಾನ್ಯ ಸದಸ್ಯರು ಹೇಳತಕ್ಕ ವಿಚಾರ ನನ್ನ ಹತ್ತಿರ ಬಂದಿಲ್ಲ, ವಿವರವನ್ನು ಕಳುಹಿಸಿ ಕೊಟ್ಟರೆ ನಾನು ಉತ್ತರ ಕೊಡುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ.—ಈ ವಿಚಾರದ ಬಗ್ಗೆ ನಾನು ಕಳೆದ ಬಾರಿ ಕೂಡ ಪ್ರಸ್ತಾಪ ಮಾಡಿದ್ದೇನೆ. ಇದುವರೆಗೂ ಕೂಡ ನನಗೆ ಉತ್ತರ ಸಿಗಲಿಲ್ಲ,

ಡಾ. ಎಚ್. ಎಲ್. ತಿಮ್ಮೇಗೌಡ.—ಮಾನ್ಯ ಸದಸ್ಯರು ವಿವರಗಳನ್ನು ಕೊಟ್ಟರೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ವಸಂತ ಸಾಲಿಯಾನ ಅವರು ಮೂರು ನೋಟೀಸ್‌ಗಳನ್ನು ಕಳುಹಿಸಿದ್ದೀರಿ, ದಯವಿಟ್ಟು ಒಂದೊಂದೇ ನೋಟೀಸ್ ಕೊಟ್ಟರೆ ಒಳ್ಳೆಯದು.

೨) ಮೈಸೂರು ನಗರದಲ್ಲಿ ಕುಡಿಯುವ ನೀರಿನ ಅಭಾವ.

ಶ್ರೀ ಕೆ. ಕೆಂಪಿರೇಗೌಡ.—ಮಾನ್ಯ ಅಧ್ಯಕ್ಷರೇ, ಮೈಸೂರು ನಗರದಲ್ಲಿ ಕುಡಿಯುವ ನೀರಿನ ಅಭಾವ ತೀವ್ರವಾಗಿದ್ದು ಸರ್ಕಾರ ಈ ಅಭಾವವನ್ನು ನೀಗಿಸಲು ಕೈಗೊಂಡು ಕ್ರಮಗಳೇನು ? ೪ ವರ್ಷ ಹಿಂದೆಯೇ ಮೈಸೂರು ನಗರ ಪುರಸಭೆ ನೀರಿನ ಯೋಜನೆಯನ್ನು ಅಭಿವೃದ್ಧಿಪಡಿಸಲು ಒಂದು ಯೋಜನೆ ಸಿದ್ಧಪಡಿಸಿ ಸರ್ಕಾರಕ್ಕೆ ಕಳುಹಿಸಿದೆ. ಈ ಯೋಜನೆಯನ್ನು ಮಂಜೂರು ಮಾಡಲು ಸರ್ಕಾರ ತುರ್ತು ಕ್ರಮ ಕೈಗೊಂಡಿದೆಯೇ ? ಈ ವರ್ಷ ಕುಡಿಯುವ ನೀರಿನ ಅಭಾವ ನೀಗಿಸಲು ಸರ್ಕಾರ ಮೈಸೂರು ನಗರದಲ್ಲಿ ಕನಿಷ್ಟ ಪಕ್ಷ ೫೦ ಕೊಳವೆ ಬಾವಿಗಳನ್ನು ಅಳವಡಿಸಿ ಮಂಜೂರಾತಿ ಮಾಡಲು ಕ್ರಮ ತೆಗೆದುಕೊಂಡಿದೆಯೇ ? ಕುಡಿಯುವ ನೀರಿನ ಅಭಾವವನ್ನು ನೀಗಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆಯೇ ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಡಳಿತ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಸನ್ಮಾನ್ಯ ಅಧ್ಯಕ್ಷರೆ, ಮೈಸೂರಿನಲ್ಲಿ ಕೊಳವೆ ಬಾವಿಗಳಿಂದ ೨ ಎಂ. ಜಿ. ಡಿ. ನೀರು ಸರಬರಾಜಾಗುತ್ತಿದೆ. ಮತ್ತೆ ಈಗ ಹಾಲಿ ಇರತಕ್ಕಂತಹ ನೀರು ಸರಬರಾಜು ವ್ಯವಸ್ಥೆಯಿಂದ ೧೭ ಎಂ. ಜಿ. ಡಿ. ನೀರು ಸರಬರಾಜು ಆಗುತ್ತಿದೆ. ಈ ರೀತಿ ಒಟ್ಟು ೧೯ ಎಂ. ಜಿ. ಡಿ. ನೀರು ಮೈಸೂರು ನಗರದ ನಾಗರೀಕರಿಗೆ ನೀರು ಸರಬರಾಜು ಆಗುತ್ತಿದೆ. ಮೈಸೂರು ನಗರದಲ್ಲಿ ಸುಮಾರು ೪.೫ ಲಕ್ಷ ಅಥವಾ ೫ ಲಕ್ಷ ಜನಸಂಖ್ಯೆ ಇದೆ. ಅಲ್ಲಿ ತಲಾವಾರು ದಿನಕ್ಕೆ ೪೦ ಗ್ಯಾಲನ್ ನೀರು ಸಿಕ್ಕತಕ್ಕಂತಹ ಸಂಭವ ಇದೆ. ಅಲ್ಲಿ ಇರತಕ್ಕಂತಹ ಡಿಸ್ಟ್ರಿಬ್ಯೂಷನ್ ಹಾಗೂ ಮೈನ್‌ಟನೆನ್ಸ್‌ನಲ್ಲಿ ತೊಂದರೆಯಾಗಿದೆ ಇರತಕ್ಕಂತಹ ತೊಂದರೆಯನ್ನು ನಿವಾರಣೆ ಮಾಡುವ ಸಲುವಾಗಿ ೨೦ ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ತಯಾರು ಮಾಡಿ ೩ನೇಯ ಪಂಚವಾರ್ಷಿಕ ಯೋಜನೆಯಲ್ಲಿ ಅದನ್ನು ಈಗಾಗಲೇ ಸೇರಿಸಲಾಗಿದೆ. ಯು.ಜಿ.ಡಿ.ಗೆ ೧೧ ೫ ಕೋಟಿ ರೂಪಾಯಿಗಳಿಗಿಂತಲೂ, ಮಾಡ್ರನೈಜ್ ಡಿಸ್ಟ್ರಿಬ್ಯೂಷನ್‌ಗೆ ೮.೫ ಕೋಟಿ ರೂಪಾಯಿಗಳಿಂತಲೂ ಹೀಗೆ ಒಟ್ಟು ೨೦ ಕೋಟಿ ರೂಪಾಯಿಗಳ ಒಂದು ಅಂದಾಜನ್ನು ತಯಾರು ಮಾಡಿ ಇದಕ್ಕೆ ಇನ್ವೆಸ್ಟಿಟ್ಯೂಷನ್‌ಲ್ ಫೈನಾನ್ಸ್‌ನ್ನು ಕೊಡಬೇಕಾಗುತ್ತದೆ. ಇದಕ್ಕಾಗಿ ಕಾರ್ಪೊ